# ಕೆಎಸ್‌ಪಿ ಕ್ಲಿಯರ್ ಪಾಸ್!

■ ಶಶಿಕುಮಾರ್ ಸಿ.




ಕೊರೊನಾ ವೈರಸ್ ಹರಡದಂತೆ ಮುನ್ನೆಚ್ಚರಿಕೆ ವಹಿಸುವ ಸಲುವಾಗಿ ಭಾರತ ಸರ್ಕಾರವು ಲಾಕ್‌ಡೌನ್ ಘೋಷಿಸಿದೆ. ಅದಕ್ಕೆ ತಕ್ಕಂತೆ ರಾಜ್ಯ ಸರ್ಕಾರವು ರಾಜ್ಯದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಈ ಅಡಕತ್ತರಿಗಳ ನಡುವೆಯೂ ನಿರ್ದಿಷ್ಟ ಕಾರಣಕ್ಕಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚಾರ ಮಾಡಲೇಬೇಕಾದವರಿಗೆ ಕರ್ನಾಟಕ ಪೊಲೀಸರು 'ಕೆಎಸ್‌ಪಿ ಕ್ಲಿಯರ್ ಪಾಸ್'ಗಳನ್ನು ಆನ್‌ಲೈನ್ ಮೂಲಕ ನೀಡುತ್ತಿದೆ. ಅಗತ್ಯ ಸರಕುಗಳ ಸಾಗಾಟಕ್ಕಾಗಿ ಮತ್ತು ಅವಶ್ಯಕ ಸೇವೆಗಳನ್ನು ನೀಡುವ ವಾಹನಗಳ ಸಂಚಾರಕ್ಕೂ ಈ 'ಕೆಎಸ್‌ಪಿ ಕ್ಲಿಯರ್ ಪಾಸ್' ಅಗತ್ಯ.

ತೀರಾ ಅಗತ್ಯವಿರುವ ವ್ಯಕ್ತಿಗಳು, ಸಂಸ್ಥೆಗಳ ವ್ಯಕ್ತಿಗಳು ಹಾಗೂ ವಾಹನಗಳು ರಸ್ತೆಯಲ್ಲಿ ಸಂಚರಿಸಲು ಅನುವು ಮಾಡಿಕೊಡುವ ಉದ್ದೇಶದಿಂದ ರಾಜ್ಯ ಪೊಲೀಸರು ಈ ಕ್ಲಿಯರ್ ಪಾಸನ್ನು ಆನ್‌ಲೈನ್ ಮುಖಾಂತರ ಒದಗಿಸುತ್ತಿದ್ದಾರೆ.

'ಸ್ಟೂಡೆಂಟ್ ರಿಟರ್ನಿಂಗ್ ಹೋಮ್', 'ಸ್ಟ್ರಾಂಡೆಡ್ ಫ್ಯಾಮಿಲಿ ರಿಟರ್ನಿಂಗ್' ಮತ್ತು 'ಮೈಗ್ರೆಂಟ್ ರಿಟರ್ನಿಂಗ್ ಹೋಮ್' ಎಂಬ ಮೂರು ಕಾರಣಗಳ ಮೇರೆಗೆ ಕೆಎಸ್‌ಪಿ ಕ್ಲಿಯರ್ ಪಾಸ್ ವಿತರಿಸಲಾಗುತ್ತಿದೆ. 'ಸ್ಟ್ರಾಂಡೆಡ್ ಫ್ಯಾಮಿಲಿ ರಿಟರ್ನಿಂಗ್' ಕಾರಣವನ್ನು ನೀಡಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ತೀರಾ ಅಗತ್ಯವುಳ್ಳವರು ಮಾತ್ರ ಸಂಚರಿಸಬಹುದು.

## ಪಾಸ್ ಪಡೆಯುವುದು ಹೇಗೆ?

ಪಾಸ್ ಅಗತ್ಯವುಳ್ಳವರು ಮೊದಲು https://kspclearpass.mygate.com/signup ಎಂಬ ರಾಜ್ಯ ಪೊಲೀಸರು ಸ್ಥಾಪಿಸಿರುವ ವೆಬ್‌ಸೈಟ್‌ಗೆ ಭೇಟಿ ನೀಡಿ ಮೊಬೈಲ್ ಸಂಖ್ಯೆ ಅಥವಾ ಇಮೇಲ್ ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕು. ಬಳಿಕ ವೆಬ್‌ಸೈಟ್‌ನಲ್ಲಿ ಕೇಳಲಾದ ಮಾಹಿತಿಯನ್ನು ಭರ್ತಿಮಾಡಿ ಪಾಸ್ ಪಡೆಯಬಹುದು.

## ಅನುಸರಿಸಬೇಕಾದ ವಿಧಾನಗಳು

ನಿಮ್ಮ ಕಂಪ್ಯೂಟರ್/ಮೊಬೈಲ್‌ನಲ್ಲಿ ಬ್ರೌಸರ್ ಮುಖಾಂತರ https://kspclearpass.mygate.com/signup ಈ ವಿಳಾಸವನ್ನು ನಮೂದಿಸಿ ಹೆಸರನ್ನು ನಮೂದಿಸಿ. ಅದರ ಜೊತೆಗೆ ಗುರುತಿನ ಚೀಟಿಯನ್ನು ಅಪ್‌ಲೋಡ್ ಮಾಡಿ ಇಲ್ಲವೇ ಗುರುತಿನ ಚೀಟಿಯ ಸಂಖ್ಯೆಯನ್ನು ನಮೂದಿಸಿ.

ಬಳಿಕ ನಿಮ್ಮ ಮೊಬೈಲ್ ಸಂಖ್ಯೆಗೆ ಹಾಗೂ ನಿಮ್ಮ ನೋಂದಾಯಿತ ಇಮೇಲ್ ವಿಳಾಸಕ್ಕೆ ವೆಬ್‌ಸೈಟ್ ವತಿಯಿಂದ ಒಟಿಪಿ ಕಳುಹಿಸಲಾಗುತ್ತದೆ. ಅದನ್ನು ನಮೂದಿಸಿ.

ಬಳಿಕ ನಿಮ್ಮ ವಿಳಾಸ, ನಗರ/ಪಟ್ಟಣ, ಪೊಲೀಸ್ ಠಾಣೆ, ಒಟ್ಟು ಸಂಚರಿಸುವ ಜನರ ಸಂಖ್ಯೆ (ಚಾಲಕ ಸೇರಿದಂತೆ ಮೂವರು ವಯಸ್ಕರು ಹಾಗೂ ಒಬ್ಬ ಮಗುವಿಗೆ ಮಾತ್ರ ಅವಕಾಶ) ನಮೂದಿಸಬೇಕು. ಅದರೊಟ್ಟಿಗೆ ಎಲ್ಲಿಂದ–ಎಲ್ಲಿಗೆ ಹೋಗಬೇಕಿದೆ ಮತ್ತು ಯಾವ ಉದ್ದೇಶಕ್ಕಾಗಿ ಹೋಗಲಾಗುತ್ತಿದೆ ಎಂಬ ವಿವರವನ್ನು ತುಂಬಬೇಕು. ಪ್ರಯಾಣ ಬೆಳೆಸುವ ದಿನಾಂಕ ಹಾಗೂ ಹಿಂದಿರುಗುವ ದಿನಾಂಕವನ್ನೂ ನಮೂದಿಸಬೇಕು.




ನೀವು ನೀಡಿದ ಎಲ್ಲ ಮಾಹಿತಿಯೂ ಪರಿಶೀಲನೆ ಹಾಗೂ ಅನುಮೋದನೆಗಾಗಿ ಪಾಸ್ ವಿತರಣಾಧಿಕಾರಿಗಳಿಗೆ ವೆಬ್‌ಸೈಟ್ ಮೂಲಕವೇ ಹೋಗುತ್ತದೆ. ನೀವು ನೀಡಿದ ಮಾಹಿತಿಯು ಸರಿಯಾಗಿದ್ದರೆ ಪಾಸ್ ಲಭ್ಯವಾಗುತ್ತದೆ. ಆ ಬಗ್ಗೆ ನೀವು ನೀಡಿದ ಇ–ಮೇಲ್ ಅಥವಾ ಮೊಬೈಲ್ ಸಂಖ್ಯೆಗೆ ಸಂದೇಶ ರವಾನೆಯಾಗುತ್ತದೆ. ಆನ್‌ಲೈನ್ ಪಾಸ್ ನಿಮಗೆ ಲಭ್ಯವಾಗಲಿದೆ. ಅದನ್ನು ನಿಮ್ಮ ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಿ ಅಥವಾ ಪ್ರಿಂಟ್ ತೆಗೆದಿಟ್ಟುಕೊಳ್ಳಿ. ಒಂದು ವೇಳೆ ನೀವು ನೀಡಿದ ಮಾಹಿತಿಯು ಸರಿಯಾಗಿಲ್ಲದಿದ್ದರೆ ಪಾಸ್ ಕೋರಿಕೆಯು ರದ್ದಾಗಲಿದೆ.

ಪಾಸ್ ಪಡೆಯಲಾದ ಅಧಿಕೃತ ವ್ಯಕ್ತಿಗಳು ನಿಗದಿಪಡಿಸಲಾದ ಸಮಯದಲ್ಲಿ ಸದರಿ ನಿಮ್ಮ ಸ್ಮಾರ್ಟ್‌ಫೋನ್ ಮುಖಾಂತರ ಡಿಜಿಟಲ್ ಪಾಸ್ ಅಥವಾ ಮುದ್ರಿತ ಪಾಸ್ ಮತ್ತು ನೋಂದಾವಣೆಯ ಸಮಯದಲ್ಲಿ ನಮೂದಿಸಿರುವ ಗುರುತಿನ ಚೀಟಿಯೊಂದಿಗೆ ಹೊರಗೆ ಹೋಗಬಹುದು ಮತ್ತು ಪೊಲೀಸ್ ಅಧಿಕಾರಿಗಳು ಕೇಳಿದಲ್ಲಿ ಅನುಮೋದಿತ ಪಾಸ್ ಅನ್ನು ತೋರಿಸಬೇಕು. ■